6) ಕೃಷಿ ಮತ್ತು ತೋಟಗಾರಿಕೆ ಅಭಿವೃದ್ಧಿ

7) ಸ್ವಯಂ ಉದ್ಯೋಗ ಯೋಜನೆಯ ಅಳವಡಿಕೆ

ತತ್ಸಂಬಂಧ 1994-95ನೇ ಸಾಲಿನಲ್ಲಿ ರೂ. 58.86 ಲಕ್ಷಗಳನ್ನು ದಿನಾಂಕ: 4-2-95ರ ಆದೇಶದಲ್ಲಿ ಬಿಡುಗಡೆ ಮಾಡಲಾಗಿದೆ.

ಆ) 1994-95ನೇ ಸಾಲಿನಲ್ಲಿ ಕುಲಕಸುಬು ಪರಂಪರೆಯನ್ನು ಅವಲಂಬಿಸಿದ ವೃತ್ತಿಪರ ಕಾರ್ಯಕ್ರಮಗಳಿಗಾಗಿ ಕೆಳಕಂಡ ಯೋಜನೆಗಳಿಗೆ ರೂ. 17.40 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

1) ಬುಟ್ಟಿ ತಯಾರಿಕೆಗೆ ಬಿದಿರು ಸರಬರಾಜು

2) ವೃತ್ತಿ ತರಬೇತಿ

3) ಕೈಗಾರಿಕಾ ಘಟಕ ಸ್ಥಾಪನೆ

4) ಆರ್ಥಿಕ ಆದಾಯ ತರುವ ಸವಲತ್ತುಗಳ ನಿರ್ಮಾಣ.

ಶ್ರೀ ಕೆ. ಜಯರಾಮಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯವಾಗಿ ನಾನು ಮೂರು ಪ್ರಶ್ನೆಗಳನ್ನು ಕೇಳಿದ್ದೇನೆ; ಆದರೆ ಮಾನ್ಯ ಮಂತ್ರಿಗಳು ಎರಡು ಪ್ರಶ್ನೆಗಳಿಗೆ ಮಾತ್ರ ಉತ್ತರ ಕೊಟ್ಟಿದ್ದಾರೆ. ಮೂರನೇ ಪ್ರಶ್ನೆಗೆ ಉತ್ತರವನ್ನು ಕೊಟ್ಟಿಲ್ಲ. ಈ ಕೊರಗರನ್ನು ಕೃಷಿಕರನ್ನಾಗಿ ಪರಿವರ್ತಿಸುವ ಮತ್ತು ಅವರಿಗೆ ಸಾಮಾಜಿಕ ಸ್ಥಾನಮಾನ ಕೊಡುವ ಕಾರ್ಯಕ್ರಮ ಸರ್ಕಾರದ ಮುಂದೆ ಇದೆಯೇ ಎಂದು ಕೇಳುತ್ತಿದ್ದೇನೆ. ನಿರುದ್ಯೋಗಿಗಳಿಗೆ ಯಾವ್ಯಾವ ತರಹ ತಾವು ಉದ್ಯೋಗ ಮತ್ತು ತರಬೇತಿ ಕೊಡುತ್ತಿದ್ದೀರಿ ಎಂದು ಮತ್ತೊಂದು ಪ್ರಶ್ನೆ ಕೇಳುತ್ತಿದ್ದೇನೆ. 1993ರಲ್ಲಿ ಕೊರಗರ ಅಭಿವೃದ್ಧಿ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡಾ॥ ಮಹಮದ್ ಪೀರ್ ಅವರ ನೇತೃತ್ವದಲ್ಲಿ ಒಂದು ಸಮಿತಿಯು ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿತ್ತು. ಆ ವರದಿ ಬಗ್ಗೆ ತಾವೇನು ಮಾಡುತ್ತಿದ್ದೀರಿ ಎಂದು ಆ ವಿಚಾರವನ್ನು ತಿಳಿಸಬೇಕು. ಇದರ ಬಗ್ಗೆ ಕೊರಗ ಜನಾಂಗದವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೇ ತಿಂಗಳಲ್ಲಿ ಸಾಮೂಹಿಕ ಪ್ರತಿಭಟನೆ ಮತ್ತು ಸತ್ಯಾಗ್ರಹ ಮಾಡುವ ಯೋಚನೆಯನ್ನು ಹಮ್ಮಿಕೊಂಡಿದ್ದಾರೆ. ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ? ಈ ಕೊರಗರ ಬಗ್ಗೆ ನಿರ್ಧಾರಾತ್ಮಕ ಯಾವುದಾದರೂ ಒಂದು ಧೋರಣೆ ಸರ್ಕಾರದ ಮುಂದೆ ಇದೆಯೇ ಎಂದು ತಿಳಿಯಲು ಅಪೇಕ್ಷಿಪಡುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಸದಸ್ಯರು ಮೂರನೆಯ ಪ್ರಶ್ನೆಗೆ ಉತ್ತರ ಕಳಿಸಿಲ್ಲವೆಂದು ಹೇಳಿದ್ದಾರೆ. ಅದನ್ನು ತರಿಸಿ ನಾನು ನೋಡುತ್ತೇನೆ. ಇಲ್ಲಿ ಇರತಕ್ಕಂಥಾದ್ದು ಎರಡು ಪ್ರಶ್ನೆಗಳು. ಮೂರನೆಯ ಪ್ರಶ್ನೆಯನ್ನು ಅವರು ಕಳಿಸಿಕೊಟ್ಟಿದ್ದೇ ಆದರೆ ಈ ಮೂರನೇ ಪ್ರಶ್ನೆಗೆ ನಾನು ಉತ್ತರವನ್ನು ಕಳಿಸತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇನೆ. ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಮತ್ತೊಂದು, ಒಂದು ಸಮಿತಿಯ ವರದಿಯ ಬಗ್ಗೆ ಹೇಳಿದ್ದಾರೆ. ಸಧ್ಯಕ್ಕೆ ಆ ಬಗ್ಗೆ ನನ್ನ ಹತ್ತಿರ ಉತ್ತರ ಇಲ್ಲ. ಕೊರಗ ಜನಾಂಗದ ಅಭಿವೃದ್ಧಿ ಬಗ್ಗೆ ಅದೇನು ವರದಿಯನ್ನು ಕೊಟ್ಟಿದ್ದಾರೆ, ಅದನ್ನು ನಾನು ತರಿಸಿಕೊಂಡು ನೋಡುತ್ತೇನೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮೈಸೂರು ಎನ್.ಆರ್. ಪುರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ

299 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ನರಸಿಂಹ ರಾಜ ವಿಧಾನ ಸಭಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿರುವ ವಿಷಯ ನಿಜವೇ?

ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಮತ್ತು ಆ) ಈ ಕ್ಷೇತ್ರದ 13 ಪ್ರದೇಶಗಳು ಮಹಾನಗರಪಾಲಿಕೆ ಆಡಳಿತಕ್ಕೆ ಒಳಪಟ್ಟಿರುತ್ತದೆ. ಮಹಾನಗರ ಪಾಲಿಕೆಗಳಲ್ಲಿ ವಿತರಣಾ ವ್ಯವಸ್ಥೆಯನ್ನು ನವೀಕರಿಸಲು ಮೈಸೂರು ನಗರದಲ್ಲಿ ರೂ. 6.50 ಕೋಟಿಗಳ ಸಮಗ್ರ ನೀರು ಸರಬರಾಜು ಅಭಿವೃದ್ಧಿ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯಿಂದ 8.00 ಎಂ.ಜಿ.ಡಿ. ಹೆಚ್ಚುವರಿ ನೀರನ್ನು ಬೆಳಗೊಳದಿಂದ ಮೈಸೂರಿಗೆ ತರಲು 750 ಎಂ.ಎಂ. ವ್ಯಾಸದ ನೀರು ಕೊಳವೆಗಳನ್ನು ಅಳವಡಿಸಲು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. 12.00 ಎಂ.ಜಿ.ಡಿ. ಜಲ ಶುದ್ಧೀಕರಣಗಾರವನ್ನು ನಿರ್ಮಿಸುವ ಕಾಮಗಾರಿಯು ಸಹ ಪ್ರಗತಿಯಲ್ಲಿರುತ್ತದೆ. ಯಾದವಗಿರಿಯಿಂದ ರಾಜೇಂದ್ರ ನಗರಕ್ಕೆ 500 ಎಂ.ಎಂ. ವ್ಯಾಸದ ಎ.ಸಿ. ಮುಖ್ಯ ಕೊಳವೆ ಮಾರ್ಗವನ್ನು ಅಳವಡಿಸಲಾಗುತ್ತಿದೆ. ಈ ಕಾಮಗಾರಿ ಮುಗಿಯುವ ಹಂತದಲ್ಲಿದೆ. ಜರ್ಮನ್ ಪ್ರೆಸ್‌ನ ಜಲಸಂಗ್ರಹಾಗದಿಂದ ಜಾಕಿ ಕ್ವಾರ್ಟರ್ಸ್ ತನಕ 450 ಎಂ ಎಂ ನಿಂದ 250 ಎಂ ಎಂ ವ್ಯಾಸದ ಎಸಿ ಮುಖ್ಯ ಕೊಳವೆ ಮಾರ್ಗವನ್ನು ಹಾಗೂ ಜರ್ಮನ್ ಪ್ರೆಸ್‌ನ ಜಲಸಂಗ್ರಹಾಗಾರದಿಂದ ಮಹದೇವಪುರಕ್ಕೆ 400 ಎಂ ಎಂ ವ್ಯಾಸದ ಎಸಿ ಮುಖ್ಯ ಕೊಳವೆ ಮಾರ್ಗವನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ರಾಜೇಂದ್ರ ನಗರದಲ್ಲಿ ನಿರ್ಮಿಸುತ್ತಿರುವ 2.00 ಲಕ್ಷ ಗ್ಯಾಲನ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾದ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮೈಸೂರು ಮಹಾನಗರಪಾಲಿಕೆ ಆಡಳಿತಕ್ಕೆ ಬಾರದ ಇತರ ಪ್ರದೇಶಗಳಲ್ಲೂ ಸಹ ಕ್ಷಾಮಪರಿಹಾರ ಕ್ರಮದಡಿಯಲ್ಲಿ ಕಿರು ನೀರು ಸರಬರಾಜು ಯೋಜನೆಯನ್ನು ಮಾಡಲಾಗಿದೆ. ಇದಲ್ಲದೆ ನೀರಿನ ಅಭಾವ ಇರುವ ಕಡೆಗಳಲ್ಲಿ ಮತ್ತಷ್ಟು ಕೊಳವೆ ಬಾವಿಗಳನ್ನು ಕೊರೆಯಲು, ದುರಸ್ತಿಯಲ್ಲಿರುವ ಕೊಳವೆ ಬಾವಿಗಳನ್ನು ಸರಿಪಡಿಸಲು ಹಾಗೂ ಇವುಗಳಿಗೆ ಕೈಪಂಪು ಅಥವಾ ಪವರ್‌ಪಂಪು ಜೋಡಿಸುವ ಕಾಮಗಾರಿಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಿರ್ವಹಿಸುತ್ತಿದೆ.

ಶ್ರೀ ಇ. ಮಾರುತಿರಾವ್ ಪವಾರ್ : ತಾವು ಕೊಟ್ಟಿರತಕ್ಕಂಥ ಉತ್ತರ ನೋಡುವುದಕ್ಕೆ ಚೆನ್ನಾಗಿದೆಯೇ ಹೊರತು ಕೊಟ್ಟಿರತಕ್ಕಂಥ ಉತ್ತರದ ಬಗ್ಗೆ ಹೇಳಬೇಕೆಂದರೆ, ಮೈಸೂರು ನಗರಕ್ಕೆ ನೀರಿನ ಬಗ್ಗೆ ಈಗಾಗಲೇ 6.5 ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿದ್ದೇವೆ ಎಂಬ ಮಾತನ್ನು ತಾವು ತಿಳಿಸಿದ್ದೀರಿ. ಈಗ 6.5 ಕೋಟಿಯಲ್ಲಿ ನನಗೆ ಗೊತ್ತಿರುವ ಹಾಗೆ 3.5 ಕೋಟಿ ರೂಪಾಯಿಗಳು ಈ ಒಂದು ಯೋಜನೆಗಾಗಿ ಮೆಚ್ಚವಾಗಿದೆ. ನಾನು ಕೆಲವು ಅಧಿಕಾರಿಗಳು ಮತ್ತು ಸಂಬಂಧಪಟ್ಟ ಕೆಲವರನ್ನು ಕೇಳಿದಾಗ ಇದರಲ್ಲಿನ ಮಿಕ್ಕ ಹಣ ಬೇರೆ ಯೋಜನೆಗೆ ಉಪಯೋಗ ಮಾಡಿದ್ದಾರೆ ಎನ್ನುವ ಮಾತು ತಿಳಿದು ಬಂತು. ತಾವು ತಿಳಿಸಿರುವಂತೆ ಈ ಯೋಜನೆ ಪ್ರಗತಿಯ ಹಂತದಲ್ಲಿದೆ. ಬಹಳ ಬೇಗನೆ ಮುಗಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ. ಈ ಹಣವನ್ನು ಬೇರೆ ಯೋಜನೆಗೆ ಉಪಯೋಗ ಮಾಡಿಕೊಂಡರೆ ಇನ್ನು ಈ ಯೋಜನೆಯನ್ನು ತಾವು ಮುಗಿಸುವುದು ಯಾವಾಗ? ಮತ್ತೆ ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಏಳೆಂಟು ವರ್ಷಗಳ ಹಿಂದೆ ನಾಯ್ಡುನಗರ, ರಾಜೇಂದ್ರನಗರ, ಸುಭಾಶ್‌ನಗರ, ಕ್ಯಾತಮಾರನಹಳ್ಳಿ, ಗಾಯತ್ರಿಪುರಂ, ಸಿದ್ಧಾಂತಿನಗರ ಬಡಾವಣೆಗಳಲ್ಲಿ ಮೇಲ್ಮಟ್ಟದ ನೀರಿನ ಟ್ಯಾಂಕ್‌ಗಳನ್ನು ನಿರ್ಮಾಣ ಮಾಡುವುದರಲ್ಲಿ ಇನ್ನೂ ಕೆಲಸ ಮುಗಿಸಿಲ್ಲ. ಈ ಕೆಲಸವನ್ನು ತಾವು ಯಾವಾಗ ಮುಗಿಸುತ್ತೀರಿ? ಹಾಗೆಯೇ ವಿಶೇಷವಾಗಿ ಮೈಸೂರು ನಗರದಲ್ಲಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಜನಾಂಗದವರು ಇದ್ದಾರೆ. ಅಲ್ಲಿ ನೀರಿನ ಮಾರಾಟ ಆಗುತ್ತಿದೆ. ಕಾವೇರಿ

ಕೃಷ್ಣರಾಜಸಾಗರ ಮೈಸೂರು ನಗರಕ್ಕೆ ತುಂಬ ಸಮೀಪ ಇದ್ದರೂ ಅಲ್ಲಿ ಕುಡಿಯುವ ನೀರಿಗೆ ನಾಲ್ಕು ಕೊಡಕ್ಕೆ 2 ರೂಪಾಯಿ, ಐದು ಕೊಡಗಳಿಗೆ ಒಂದು ರೂಪಾಯಿನಂತೆ ಹೀಗೆ ಈ ವಿಧಾನಸಭಾ ಕ್ಷೇತ್ರದಲ್ಲಿ ನೀರಿನ ಮಾರಾಟ ಆಗುತ್ತಿದೆ. ಇದನ್ನೆಲ್ಲ ಅರಿತು ದಯಮಾಡಿ ಮಾನ್ಯ ಮಂತ್ರಿಗಳು, ಈ ನಾಲ್ಕೈದು ಕೋಟಿ ರೂಪಾಯಿ ಯೋಜನೆ ಏನಿದೆ, ಇದನ್ನು ಯಾವಾಗ ಮುಗಿಸುತ್ತೀರಿ ಎಂದು ಹೇಳಬೇಕು. ಇದನ್ನು ಮಾಡಿ ಮುಗಿಸಿದರೆ ಮೈಸೂರು ನಗರದ ನೀರಿನ ಸಮಸ್ಯೆ ಮುಗಿಯುವುದಿಲ್ಲ. ಈಗಾಗಲೇ 28 ಕೋಟಿ ರೂಪಾಯಿಗಳಲ್ಲಿ ಮೇಳಾಪುರದ ಯೋಜನೆ ಬಗ್ಗೆ ತೀರ್ಮಾನವಾಗಿದೆ. ಅದಕ್ಕೆ ತಾವು ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ಈ ಕೆಲಸವನ್ನು ಯಾವಾಗ ಮುಗಿಸುತ್ತೀರಿ ಎಂದು ದಯವಿಟ್ಟು ತಿಳಿಸಿ ಉತ್ತರವನ್ನು ಕೊಡಬೇಕೆಂದು ವಿನಂತಿಸುತ್ತೇನೆ.

ಅಧ್ಯಕ್ಷರು : ಇಷ್ಟು ದೊಡ್ಡ ಉಪಪ್ರಶ್ನೆಯನ್ನು ಹಾಕಿದರೆ ಅವರು ಉತ್ತರ ಹೇಳುವುದು ಹೇಗೆ?

ಶ್ರೀ ವೈಜ್ಯನಾಥ ಪಾಟೀಲ್ : ಈ ವಿಧಾನಸಭಾ ಕ್ಷೇತ್ರ ಅರ್ಬನ್ ಏರಿಯಾದಲ್ಲಿ ಬರುವುದಿಲ್ಲ. ಕೆಲವು ಏರಿಯಾಗಳು ಮಾತ್ರ ಬರುತ್ತವೆ. ಆದರೂ ಕೂಡ ಸರ್ಕಾರದವರು ಈಗ 650 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಸುಮಾರು ಅರ್ಧದಷ್ಟು ಈಗಾಗಲೇ ಖರ್ಚು ಮಾಡಲಾಗಿದೆ. ಇನ್ನು ಉಳಿದ ಹಣ ಕೂಡ ಬೇರೆ ಕಡೆಗೆ ಡೈವರ್ಟ್ ಮಾಡಲಾರದೆ ಸರಿಯಾದ ಸಮಯದಲ್ಲೇ ಖರ್ಚಾಗುತ್ತದೆ. ಈಗ ಬೇರೆ ಭಾಗಗಳಲ್ಲಿ ಅರ್ಬನ್ ಡೆವಲಪ್‌ಮೆಂಟ್ ಏರಿಯಾ ಬಾರದಿದ್ದರೂ ಕೂಡ ಅಲ್ಲಿಯೂ ಸಹ ಅನೇಕ ಯೋಜನೆಗಳನ್ನು ಹಾಕಿಕೊಳ್ಳುತ್ತಿದ್ದೇವೆ. ಸರ್ಕಾರದ ವತಿಯಿಂದ, ಕೊಳವೆಬಾವಿಗಳನ್ನು ತೆಗಿಸಿ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತಿದೆ. ಹಾಗೆಯೇ ಟ್ಯಾಂಕರ್‌ಗಳ ಮೂಲಕ ನೀರನ್ನು ಒದಗಿಸುವ ವ್ಯವಸ್ಥೆಯನ್ನೂ ಮಾಡುತ್ತಿದ್ದೇವೆ.

ಶ್ರೀ ಇ. ಮಾರುತಿರಾವ್ ಪವಾರ್ : ಈ ಯೋಜನೆಗೆ ಇಟ್ಟಂಥ ಹಣ ಬೇರೆ ಯೋಜನೆಗೆ ಉಪಯೋಗವಾಗಿದೆ. ಆದ್ದರಿಂದ ಈ ಯೋಜನೆ ಬೇಗ ಆಗುವುದಿಲ್ಲ. ಆ ಹಣವನ್ನೂ ಬೇರೆ ಕಡೆಗೆ ಉಪಯೋಗ ಮಾಡಿಕೊಂಡರೆ 6.5 ಕೋಟಿಯ ಈ ಯೋಜನೆ ಏನಿತ್ತು ಅದು ಹತ್ತು ಕೋಟಿಯಾಗಬಹುದು. ಯೋಜನೆಗೆ ಇಟ್ಟಂಥ ಹಣವನ್ನು ಉಪಯೋಗಿಸಿ ಸಂಪೂರ್ಣವಾಗಿ ಕೆಲಸ ಪೂರ್ತಿ ಮಾಡಿದ್ದರೆ ಈ ಯೋಜನೆ ಮುಗಿಯುತ್ತಿತ್ತು. ಆದ್ದರಿಂದ ಈ ಯೋಜನೆಯನ್ನು ಯಾವಾಗ ಮುಗಿಸುತ್ತೀರಿ? ಇದು ಇನ್ನು ಎಷ್ಟು ತಿಂಗಳಲ್ಲಿ, ಎಷ್ಟು ವರ್ಷಗಳಲ್ಲಿ ಆಗಬಹುದು?

ಶ್ರೀ ವೈಜ್ಯನಾಥ ಪಾಟೀಲ್ : ಆ ಹಣ ಬೇರೆ ಯೋಜನೆಗಳಿಗೆ ಉಪಯೋಗವಾಗುವುದಿಲ್ಲ. ಅದರದ್ದು ಹಣ ಏನು ಇದೆ, ಅದು ಅದಕ್ಕೇ ಉಪಯೋಗವಾಗುತ್ತದೆ. ಮತ್ತು ಆದಷ್ಟು ತೀವ್ರಗತಿಯಲ್ಲಿ ಆ ಕೆಲಸವನ್ನು ಪೂರ್ಣ ಮಾಡುತ್ತೇವೆ ಎಂದು ನಾನು ಆಶ್ವಾಸನೆಯನ್ನು ಕೊಡುತ್ತೇನೆ.

ಮೈಸೂರು ನಗರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ

290 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗುತ್ತಿದ್ದು ಕಾವೇರಿ ನೀರಿನ ಸರಬರಾಜಿನ ಯೋಜನೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಕಾವೇರಿ ಕುಡಿಯುವ ನೀರಿನ ಯೋಜನೆಗೆ ಇದುವರೆಗೆ ವೆಚ್ಚವಾಗಿರುವ ಹಣವೆಷ್ಟು?